ಗಮನಕ್ಕೆ ಬಂದಿದೆಯೇ?

ಇ) ಆಶ್ರಯ ಯೋಜನೆಯ ಎಲ್ಲಾ ಮನೆಗಳ ನೋಂದಣಿ ಶುಲ್ಕವನ್ನು ಪೂರ್ವಾನ್ವಯದಿಂದ ಮನ್ನಾ ಮಾಡಲು ಸರ್ಕಾರವು ಉದ್ದೇಶಿಸಿದೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) ಆಶ್ರಯ ಯೋಜನೆ ಮನೆಗಳ ದಸ್ತಾವೇಜುಗಳ ನೋಂದಣಿಗೆ ಸಂಬಂಧಿಸಿದಂತೆ ಆದೇಶ ಸಂ.ಆರ್‌ಡಿ 162 ಇಎಸ್‌ಎಂ 93 ದಿ:6-1-94ರ ಪ್ರಕಾರ ನೋಂದಣಿ ಫೀಗೆ ಶೇಕಡಾ - 50ರಷ್ಟು ರಿಯಾಯ್ತಿಯನ್ನು ದಿನಾಂಕ:6-1-94ರಿಂದ ನೀಡಲಾಗಿತ್ತು. ಪುನಃ ಆದೇಶ ಸಂ.ಆರ್‌ಡಿ 37 ಇಎಸ್‌ಆರ್ 94, ದಿನಾಂಕ: 25-2-94ರ ಪ್ರಕಾರ ನೋಂದಣಿ ಫೀಯ ಪೂರ್ಣ ರಿಯಾಯ್ತಿಯನ್ನು ದಿನಾಂಕ:25-2-94ರಿಂದ ನೀಡಲಾಗಿದೆ.

ಆ) ಬಂದಿದೆ.

ಇ) ಈ ಪ್ರಸ್ತಾವನೆಯನ್ನು ವಸತಿ ಇಲಾಖೆಯು ಪರಿಶೀಲಿಸುತ್ತಿದ್ದು ಆ ಇಲಾಖೆಯಿಂದ ಶಿಫಾರಸ್ಸು ಬಂದ ಕೂಡಲೇ ನಿಯಮಾನುಸಾರ ಕಂದಾಯ ಇಲಾಖೆಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ:- 94-95 ಮತ್ತು 95-96ನೇ ಸಾಲುಗಳಲ್ಲಿ ಮೋಟಾರುವಾಹನ ಇಲಾಖೆಯಲ್ಲಿ ಕಡಿಮೆ ತೆರಿಗೆ ವಿಧಿಸಿರುವ ಪ್ರಕರಣಗಳಿಂದ ಸರ್ಕಾರಕ್ಕೆ ನಷ್ಟ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 266 (611)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1994-95 ಹಾಗೂ 1995-96ನೇ ಸಾಲುಗಳಲ್ಲಿ ರಾಜ್ಯದಲ್ಲಿ ಮೋಟಾರು ವಾಹನ ಇಲಾಖೆಯಲ್ಲಿ ಕಡಿಮೆ ತೆರಿಗೆಯನ್ನು ವಿಧಿಸಿರುವ ಎಷ್ಟು ಪ್ರಕರಣಗಳು ಸರ್ಕಾರದವರ ಗಮನಕ್ಕೆ ಬಂದಿದೆ ಹಾಗೂ ಇದರಿಂದಾಗಿ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ.

ಆ) ಈ ರೀತಿ ಕಡಿಮೆ ತೆರಿಗೆ ವಿಧಿಸಿರುವ ಪ್ರಕರಣಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) 1994-95 ಮತ್ತು 1995-96ನೇ ಸಾಲುಗಳಲ್ಲಿ ಮೋಟಾರು ವಾಹನ ಇಲಾಖೆಯಲ್ಲಿ ಕಡಿಮೆ ತೆರಿಗೆ ವಿಧಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಯಾವುದೂ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ವಿಶೇಷ ಆಹಾರ ಧಾನ್ಯಗಳ ಕಾರ್ಯಕ್ರಮದಲ್ಲಿ ಖರ್ಚಾದ ಮೊತ್ತ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 267 (612)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ವಿಶೇಷ ಆಹಾರ ಧಾನ್ಯಗಳ ಕಾರ್ಯಕ್ರಮ (ಭತ್ತ) ರಾಜ್ಯದಲ್ಲಿ ಯಾವಾಗ ಪ್ರಾರಂಭವಾಯಿತು ಮತ್ತು ಯಾವ ಜಿಲ್ಲೆಗಳಲ್ಲಿ ಇದನ್ನು ಪ್ರಾರಂಭಿಸಲಾಯಿತು?

ಆ) ಈ ಯೋಜನೆಯಲ್ಲಿ ಪ್ರತಿವರ್ಷ ಖರ್ಚು ಮಾಡಿದ ಮೊತ್ತ?

ಇ) ಈ ಯೋಜನೆಯಡಿ ಯಾವ ಯಾವ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ?

ಈ) ಅನುಷ್ಠಾನ ಅಧಿಕಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಿರುವುದು ನಿಜವೇ ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):-

ಅ) ವಿಶೇಷ ಆಹಾರ ಧಾನ್ಯಗಳ ಕಾರ್ಯಕ್ರಮ ಭತ್ತ (ವಿಶೇಷ ಆಹಾರ ಉತ್ಪಾದನಾ ಕಾರ್ಯಕ್ರಮ ಭತ್ತ) ರಾಜ್ಯದಲ್ಲಿ 1988-89ರಲ್ಲಿ ಪ್ರಾರಂಭಿಸಲಾಯಿತು. ಮತ್ತು ಈ ಕಾರ್ಯಕ್ರಮ 1989-90ರ ವರೆಗೆ ಅನುಷ್ಠಾನದಲ್ಲಿತ್ತು. ಈ ಕಾರ್ಯಕ್ರಮವನ್ನು 8 ಜಿಲ್ಲೆಗಳಲ್ಲಿ ಅಂದರೆ ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಕೊಡಗು, ದಕ್ಷಿಣಕನ್ನಡ, ಧಾರವಾಡ, ಉತ್ತರಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಯಿತು. ಆದರೆ 1990-91ರಿಂದ ಈ ಕಾರ್ಯಕ್ರಮದ ಹೆಸರನ್ನು ಸಮಗ್ರ ಅಕ್ಕಿ ಅಭಿವೃದ್ಧಿ ಕಾರ್ಯಕ್ರಮ ಎಂದು ಹೆಸರಿಸಿ 5 ಜಿಲ್ಲೆಗಳಾದ ಮಂಡ್ಯ, ಮೈಸೂರು, ಚಿತ್ರದುರ್ಗ ಬಳ್ಳಾರಿ, ಮತ್ತು ರಾಯಚೂರು ಜಿಲ್ಲೆಗಳಲ್ಲಿ ವಿಸ್ತರಿಸಲಾಯಿತು. ಈ ಕಾರ್ಯಕ್ರಮವು 1990-91ನೇ ಸಾಲಿನ ವರೆಗೆ ಆಚರಣೆಯಲ್ಲಿತ್ತು.

ಆ) ಯೋಜನೆಯಡಿ ವಾರ್ಷಿಕವಾರು ಖರ್ಚುಮಾಡಿದ ಮೊತ್ತ ಹೀಗಿದೆ.

ವಿಶೇಷ ಆಹಾರ ಉತ್ಪಾದನಾ ಯೋಜನೆ:

1988-89	ರೂ. 206.64 ಲಕ್ಷ
1989-90	ರೂ. 143.07 ಲಕ್ಷ

ಸಮಗ್ರ ಅಕ್ಕಿ ಅಭಿವೃದ್ಧಿ ಕಾರ್ಯಕ್ರಮ:

1990-91	ರೂ. 304.720 ಲಕ್ಷ
1991-92	ರೂ. 369.383 ಲಕ್ಷ